ಮಧುಗಿರಿ ಆಗಬಹುದು, ಪಾವಗಡ ಆಗಬಹುದು, ಇವು ಬರೀ ಹಿಂದುಳಿದಂಥ ಪಟ್ಟಣವಾಗಿದೆ. ಅಲ್ಲಿನ ಜನತೆ ನಾಗರೀಕ ಸೌಕರ್ಯದಿಂದ ವಂಚಿತರಾಗಿದ್ದಾರೆ. ಸರ್ಕಾರ ಹೆಚ್ಚಿನ ಹಣವನ್ನು ಬಿಡುಗಡೆ ಮಾಡುವುದರ ಮುಖೇನ ನಾಗರೀಕ ಸೌಲಭ್ಯವನ್ನು ಹೆಚ್ಚಿಗೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಕುಮಾರ್ ಬಂಗಾರಪ್ಪ :– ಮಾನ್ಯ ಅಧ್ಯಕ್ಷರೆ, ತಿಂಗಳ ಸಂಬಳ ಕೊಡತಕ್ಕಂಥ ವಿಚಾರದಲ್ಲಿ ಎಸ್‌ಸಿಪಿ ಗ್ರಾಂಟ್‌ನಿಂದ ಸುಮರು 1.7 ಲಕ್ಷ ರೂಪಾಯಿಗಳನ್ನು ಈಗಲೇ ನಾವು ಬಿಡುಗಡೆ ಮಾಡುತ್ತಿದ್ದೇವೆ. ಸಂಬಳವನ್ನು ಎಸ್‌ಸಿಪಿ ಗ್ರಾಂಟ್‌ನಿಂದ ಇಲ್ಲಿಂದಲೇ ಕೊಡುವುದರಿಂದ ಲೋಕಲ್ ಆಗಿ ನೀವು ಏನು ತೆರಿಗೆಯನ್ನು ವಸೂಲಿ ಮಾಡಬೇಕಾಗಿತ್ತೋ ಅದನ್ನು ಮೊದಲು ವಸೂಲಿ ಮಾಡಿದರೆ ತನ್ನಷ್ಟಕ್ಕೇ ತಾನೇ ನೀವು ಉಳಿದ ಅಭಿವೃದ್ಧಿ ಕೆಲಸಗಳನ್ನು ಮಾಡಬಹುದು.

ಶ್ರೀ ಕೆ.ಎಂ. ಕೃಷ್ಣಮೂರ್ತಿ :– ಸ್ವಾಮಿ, ಸಂಬಳ ಏನೂ ಹಾಗೆ ಕೊಡುವುದಿಲ್ಲ. ಅಕ್ಕಾಯಿ ಇದೆಯಲ್ಲಾ.....

ಅಧ್ಯಕ್ಷರು :– ಮುಂದಿನ ಪ್ರಶ್ನೆಯನ್ನು ಮಾನ್ಯ ಎ.ಆರ್. ಕೃಷ್ಣಮೂರ್ತಿ ಕೇಳಿ ಕೊರಟಗೆರೆ ಬಗ್ಗೆ ಚೆನ್ನಿಗಪ್ಪರವರು ಪ್ರಶ್ನೆ ಕೇಳಿ ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಸಂಬಂದಿಸಿದಂತೆ ಬೇರೆಯವರಿಗೆ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುವುದಿಲ್ಲ. ಈಗ ಮುಂದಿನ ಪ್ರಶ್ನೆ.

ಚಾಮರಾಜನಗರದಲ್ಲಿ ಬಸ್‌ಡಿಪೋ ಮಂಜೂರು ಮಾಡುವುದು

433 (3913) : ಶ್ರೀ ಕೃಷ್ಣಮೂರ್ತಿ ಎ.ಆರ್. (ಸಂತೇಮರಳ್ಳಿ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಬಸ್ ಡಿಪೋ ಮಂಜೂರು ಮಾಡಲಾಗಿದೆಯೇ;

ಆ) ಮಂಜೂರಾಗಿದ್ದಲ್ಲಿ, ಬಸ್ ಡಿಪೋ ನಿರ್ಮಾಣ ಕಾರ್ಯ ಯಾವಾಗ ಆರಂಭ ಮಾಡಲಾಗುವುದು;

ಇ) ಇದಕ್ಕೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು?

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :

ಅ) ಹೌದು.

ಆ) ಗುತ್ತಿಗೆದಾರರೊಡನೆ ಕರಾರುಪತ್ರ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಆದಷ್ಟು ಬೇಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಕಾಮಗಾರಿಯ ಅಂದಾಜು ಮೊತ್ತ ರೂ. 60.00 ಲಕ್ಷಗಳು.

ಶ್ರೀ ಎ.ಆರ್. ಕೃಷ್ಣಮೂರ್ತಿ :– ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ನಾನು ಕೇಳುವುದೇನೆಂದರೆ, ಈ ಬಸ್ ಡಿಪೋ ಬಹಳಷ್ಟು ವರ್ಷಗಳ ಹಿಂದೆಯೆ ಮಂಜೂರು ಆಗಿದೆ. ನಮ್ಮ ಜಿಲ್ಲೆ ಉದಯವಾಗಿ 5 ವರ್ಷಗಳನ್ನು ನಾವು ಕಳೆದಿದ್ದೇವೆ. ಇನ್ನೂ ಕೂಡ ಗುತ್ತಿಗೆದಾರರೊಡನೆ ಕರಾರುಪತ್ರ ಮಾಡಿಕೊಳ್ಳಲಿಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ, ಆದಷ್ಟು ಬೇಗ ನಾವು ಪ್ರಾರಂಭ ಮಾಡುತ್ತೇವೆ. ಎಂದು ವೇಗ್ ಆಗಿ ಉತ್ತರವನ್ನು ಕೊಟ್ಟಿದ್ದಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ. ನಿರ್ದಿಷ್ಟ ಸಮಯದಲ್ಲಿ, ಇಂಥ ದಿನಾಂಕದೊಳಗೆ ಪ್ರಾರಂಭ ಮಾಡುತ್ತೇವೆ

ಎನ್ನುವ ನಿರ್ದಿಷ್ಟವಾದ ಉತ್ತರವನ್ನು ಕೊಡಬೇಕಾಗಿತ್ತು. ಶಾಸಕರು ಹಾಗೂ ಆ ಸಂಸ್ಥೆಯ ಅಧ್ಯಕ್ಷರಾದಂಥ ಶ್ರೀ ದೇವರಾಜುರವರೂ ಕೂಡ ಬಂದು ಆ ಕಾಮಗಾರಿಯ ಶಂಕುಸ್ಥಾಪನೆ ಮಾಡಿ ಬಹಳಷ್ಟು ತಿಂಗಳುಗಳು ಆಗಿಬಿಟ್ಟಿದೆ. ಆದರೆ ಇಲ್ಲಿಯವರೆಗೂ ಕೂಡ ಕಾಮಗಾರಿ ಪ್ರಾರಂಭವಾಗದೆ ಇನ್ನೂ ಗುತ್ತಿಗೆದಾರರ ಜೊತೆ ಚರ್ಚೆ ಮಾಡಲಾಗುವುದು ಎನ್ನುವ ಪ್ರಶ್ನೆಯನ್ನೇ ಅವರು ಮುಂದಿಟ್ಟಿರುವುದರಿಂದ, ಜರೂರಾಗಿ ಈ ಕೆಲಸಕಾರ್ಯಗಳು ಪ್ರಾರಂಭವಾಗಿ ನಮ್ಮ ಜಿಲ್ಲಾ ಕೇಂದ್ರಲ್ಲಿ ಇರತಕ್ಕಂಥ ಪ್ರಯಾಣಿಕರಿಗೆ ಅನುಕೂಲವಾಗಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) :– ಮಾನ್ಯ ಅಧ್ಯಕ್ಷರೆ, ನಮ್ಮ ಚಾಮರಾಜನಗರ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಬಸ್ ಡಿಪೋ ಮಾಡುವುದಕ್ಕೆ ಮಾನ್ಯ ರಾಜೂಗೌಡರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಗುದ್ದಲಿ ಪೂಜೆ ಮಾಡಿದ್ದು, ಇದು ಆಗಿ 6 ತಿಂಗಳು ಆಯಿತು.. ಬಹುಶಃ ಇನ್ನೂ ಕೂಡ ಗುತ್ತಿಗೆದಾರರೊಡನೆ ಕರಾರುಪತ್ರ ಮಾಡತಕ್ಕಂಥ ಮಾತನ್ನು ಹೇಳುತ್ತಿದ್ದಾರೆ. ಇದೆಲ್ಲಾ ಕಂಪ್ಲೀಟ್ ಪ್ರೋಸಸ್ ಆದನಂತರ ಗುದ್ದಲಿ ಪೂಜೆ ಆಗತಕ್ಕಂಥದ್ದು. ಏಕೆ ಇಷ್ಟು ತಾತ್ಸಾರ ಭಾವನೆ? ದಯವಿಟ್ಟು ಮಾನ್ಯ ಕೆ.ಎಸ್.ಆರ್.ಟಿ.ಸಿ. ಮಂತ್ರಿಗಳು ಈ ಕಾಮಗಾರಿಯನ್ನು ತುರ್ತಾಗಿ ಪ್ರಾರಂಭಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ. ರಮಾನಾಥ ರೈ :– ಮಾನ್ಯ ಅಧ್ಯಕ್ಷರೆ, ಚಾಮರಾಜನಗರ ಇದು ರಾಷ್ಟ್ರೀಕರಣವಲ್ಲದ ಪ್ರದೇಶವಾಗಿದ್ದು ಇದುವರೆಗೆ ಅಲ್ಲಿ ಘಟಕ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗಿಲ್ಲ. ಆದರೆ ನಾವು ಇತ್ತೀಚೆಗೆ ಚಾಮರಾಜನಗರದಲ್ಲಿ 60 ಲಕ್ಷ ರೂ ನ ಅಂದಾಜು ಪಟ್ಟಿಯ ಬಸ್ಸು ಡಿಪೋಗೆ ಮಂಜೂರಾತಿ ಕೊಟ್ಟು ಟೆಂಡರ್ ಕರೆದು ಒಬ್ಬ ಮಹಾಬಲೇಶ್ವರ ಬೈರಿ ಎನ್ನುವವರಿಗೆ ಗುತ್ತಿಗೆ ವಹಿಸಿಕೊಡಲಾಗಿದೆ. ಕರಾರಿಗೆ ಹಸ್ತಾಕ್ಷರ ಮಾಡತಕ್ಕಂಥದ್ದು ಅದು ಸಣ್ಣ ಕೆಲಸ. ಅದು ಮುಗಿದ ತಕ್ಷಣ ಈ ಕೆಲಸ ಪ್ರಾರಂಭವಾಗುತ್ತದೆ. ಒಬ್ಬನಿಗೆ ನಾವು ಗುತ್ತಿಗೆ ಕೊಟ್ಟಿದ್ದೇವೆ. ಆತನು ಗುತ್ತಿಗೆ ವಹಿಸಿಕೊಂಡಿದ್ದಾನೆ. ಆದಷ್ಟು ಬೇಗ ಈ ಕೆಲಸ ಪ್ರಾರಂಭವಾಗುತ್ತದೆ.

ಶ್ರೀ ಎ.ಆರ್. ಕೃಷ್ಣಮೂರ್ತಿ :– ಮಾನ್ಯ ಅಧ್ಯಕ್ಷರೆ, ಇಂಥ ದಿನಾಂಕದೊಳಗೆ ಪ್ರಾರಂಭವಾಗುತ್ತದೆಂದು ಸ್ಪೆಸಿಫಿಕ್ ಆಗಿ ಹೇಳಿಬಿಟ್ಟರೆ ಬಹಳ ಸೂಕ್ತ ಎಂದು ತೋರುತ್ತದೆ. ಏಕೆಂದರೆ ಇದು ಮತ್ತೆ ಮತ್ತೆ ಪ್ರೊಲಾಂಗ್ ಆಗಬಹುದು.

ಅಧ್ಯಕ್ಷರು :– ಸಚಿವರು ಬೇಗ ಬೇಗ ಮಾಡಿಸಿ.

ಶ್ರೀ ಎ. ಆರ್. ಕೃಷ್ಣಮೂರ್ತಿ :– ಹಾಗಾಗಿ ಸ್ಪೆಸಿಫಿಕ್ ಆಗಿ ಸಂಬಂಧಪಟ್ಟವರಿಗೆ ಸೂಚನೆ ಕೊಡಬೇಕು.

ಶ್ರೀ ಬಿ. ರಮಾನಾಥ ರೈ :– ಮಾನ್ಯ ಅಧ್ಯಕ್ಷರೆ, ಒಬ್ಬನಿಗೆ ಟೆಂಡರ್ ಅನ್ನು ವಹಿಸಿಕೊಡಲಾಗಿದೆ. ಆದಷ್ಟು ಬೇಗ ಪ್ರಾರಂಭ ಮಾಡುತ್ತೇವೆ.

ಮುಂಡರಗಿ ತಾಲ್ಲೂಕಿನ ಕಕ್ಕೂರ ಏತ ನೀರಾವರಿ ಯೋಜನೆಯ ಎರಡನೆಯ ಹಂತದ ಕೆಲಸ ಪ್ರಾರಂಭಿಸುವುದು

435 (3532) : ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮುಂಡರಗಿ ತಾಲ್ಲೂಕು ಕಕ್ಕೂರ ಏತ ನೀರಾವರಿ ಯೋಜನೆಯ 2ನೇ ಹಂತದ ಅಂದಾಜು ವೆಚ್ಚವೆಷ್ಟು;